ಬೇರೆ ವಿಚಾರ. FIR ಹಾಕದೇ ನಿಮ್ಮ Station ರವರು ಏಕೆ ಸುಮ್ಮನೆ ಕುಳಿತಿದ್ದಾರೆ? ನೀವು ಏನಾದರೂ ಅವರಿಗೆ ರಕ್ಷಣೆ ಮಾಡುತ್ತಿದ್ದೀರಾ ? Law Minister ರಕ್ಷಣೆ ಮಾಡುತ್ತಿದ್ದಾರಾ? Home Minister ದಯವಿಟ್ಟು ತಿಳಿಸಬೇಕು. ಏಕೆಂದರೆ ಇಲ್ಲಿ ನ್ಯಾಯವನ್ನು ಒದಗಿಸಿಕೊಡಬೇಕು. Injustice should not be blown from the seat of Justice. ತಾವು Direction ಕೊಡಬೇಕು. ಇಲ್ಲ FIR ಹಾಕಿ ಮಿಕ್ಕಿದ್ದು ಕಾನೂನು ಪ್ರಕಾರ ಆಗಲಿ. ನಾಳೆ ಬೆಳಿಗ್ಗೆ Investigation ಮಾಡಿ ಬಿ ರಿಪೋರ್ಟ್ ಬರೆಯಿರಿ. ನಾನು ಬೇಡವೆಂದು ಹೇಳುವುದಿಲ್ಲ. ಸುಳ್ಳಾಗಿರಬಹುದು. ಸುಳ್ಳು complaint ಕೊಟ್ಟಿರುವವರ ಮೇಲೆ ಕೇಸ್ ಹಾಕಲಿ. ಮಾನನಷ್ಟ ಮೊಕದ್ದಮೆ ಹಾಕಲಿ. ಈಗ ನಾವೆಲ್ಲ ಅನುಭವಿಸುತ್ತಿದ್ದೇವಲ್ಲ? ದಯವಿಟ್ಟು ಮಾನ್ಯ ಮಂತ್ರಿಗಳು ಇಲ್ಲಿಯೇ ಇದ್ದಾರೆ. Whatever the complaint is, you know the Law, you are the Law Minister. FIR ಹಾಕುವಂಥಾದ್ದು ಒಂದು basic duty ಬರೀ endorsement ಕೊಟ್ಟುಬಿಟ್ಟು ನಾಳೆ ನಾನು ಅವರನ್ನು ಕೇಳಬೇಕು, ಇವರನ್ನು ಕೇಳಬೇಕೆಂದು ತಳ್ಳುತ್ತಿದ್ದಾರೆ. This is wrong.

ಶ್ರೀ ಎಸ್. ಸುರೇಶ ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :– ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಡಿ.ಕೆ. ಶಿವಕುಮಾರ್‌ರವರು ಈ ವಿಚಾರವನ್ನು ಈಗ ನನ್ನ ಗಮನಕ್ಕೆ ತರುತ್ತಿದ್ದಾರೆ. ನಿನ್ನ 27ನೇ ತಾರೀಖು ಮೆ॥ ನಂದಿ ಇಂಜನಿಯರಿಂಗ್ ಲಿಮಿಟೆಡ್ ಇವರು. ಸ್ಟೇಷನ್ ಹೌಸ್ ಆಫೀಸರ್, ವಿಧಾನಸೌಧ ಪೊಲೀಸ್ ಸ್ಟೇಷನ್‌ಗೆ complaint ಕೊಟ್ಟಿದ್ದರೂ ಇದುವರೆಗೂ FIR Lodge ಮಾಡಿಲ್ಲವೆನ್ನುವ ವಿಚಾರವನ್ನು ಗಮನಕ್ಕೆ ತರುತ್ತಿದ್ದಾರೆ. ನಾನೂ ಕೂಡಲೆ ಈ ವಿಚಾರದಲ್ಲಿ ಏನು complaint ಕೊಟ್ಟಿದ್ದಾರೆ. ಅದರ ವಿಚಾರ ಕುರಿತು ಅಗತ್ಯ ಕ್ರಮ ಜರುಗಿಸುವುದಕ್ಕೆ FIR ಮಾಡಬೇಕು. ಮಿಕ್ಕ ಕ್ರಮ ಜರುಗಿಸುವುದಕ್ಕೆ ನಾನು ಆದೇಶ ಕೊಡುತ್ತೇನೆ.

ಅಧ್ಯಕ್ಷರು :– ಈಗ ಒಂದು ಪ್ರಕಟಣೆ ಇದೆ.

"ಕಾರ್ಯಕಲಾಪ ಪಟ್ಟಿಯಂತೆ 2012–13ನೇ ಸಾಲಿನ ಆಯವ್ಯಯದ ಮೇಲಿನ ಸಾಮಾನ್ಯ ಚರ್ಚೆಯನ್ನು ಈಗಾಗಲೇ ಮಾನ್ಯ ವಿರೋಧ ಪಕ್ಷದ ನಾಯಕರು ಪ್ರಾರಂಭಿಸಿದ್ದು. ವಿವಿಧ ಪಕ್ಷದ ಸದಸ್ಯರು ಚರ್ಚೆಯಲ್ಲಿ ಭಾಗವಹಿಸಿದ ನಂತರ ಮಾನ್ಯ ಮುಖ್ಯಮಂತ್ರಿಗಳು ನಾಳೆ ಎಂದರೆ ದಿನಾಂಕ : 29–3–2012 ರಂದು ಮಧ್ಯಾಹ್ನ 1–00 ಗಂಟೆಗೆ ಉತ್ತರವನ್ನು ನೀಡಲಿರುವರು.

ಈ ದಿಸೆಯಲ್ಲಿ ವಿವಿಧ ಪಕ್ಷಗಳಿಗೆ ಈ ಕೆಳಕಂಡಂತೆ ಸಮಯಾವಕಾಶವನ್ನು ಹಂಚಿಕೆ ಮಾಡಲಾಗಿದೆ. ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ಗೆ 5 ಗಂಟೆ, ಜಾತ್ಯಾತೀತ ಜನತಾ ದಳಕ್ಕೆ 2 ಗಂಟೆ, ಭಾರತೀಯ ಜನತಾ ಪಾರ್ಟಿಗೆ 4.30 ಗಂಟೆಗೆ ಮಾನ್ಯ ಮುಖ್ಯಮಂತ್ರಿಗಳ ಉತ್ತರವೂ ಸೇರಿದಂತೆ, ಪಕ್ಷೇತರರಿಗೆ ಅರ್ಧ ಗಂಟೆ, ಒಟ್ಟು 12 ಗಂಟೆ ಸಮಯವನ್ನು ನಿಗದಿಪಡಿಸಲಾಗಿದೆ. ಈ ಕುರಿತು ಎಲ್ಲಾ ಮಾನ್ಯ ಸದಸ್ಯರುಗಳ ಸಹಕಾರವನ್ನು ಕೋರುತ್ತೇನೆ.

(ಗೊಂದಲ)

ಅಧ್ಯಕ್ಷರು :– ಈಗ ವಿರೋಧ ಪಕ್ಷದ ನಾಯಕರು ಚರ್ಚೆಯನ್ನು ಪ್ರಾರಂಭ ಮಾಡಲಿ, ಕುಳಿತುಕೊಳ್ಳಿ.

ಶ್ರೀ ಎ.ಎಸ್. ಪಾಟೀಲ್ (ನಡಹಳ್ಳಿ) :– ಮಾನ್ಯ ಅಧ್ಯಕ್ಷರೆ, ಬರಗಾಲವಿದೆ. ಮಾತನಾಡಿ ಎಂದು ನಮ್ಮನ್ನು ಕಳುಹಿಸಿದ್ದಾರೆ. ಇಲ್ಲಿ ನೀವು ಮಾತನಾಡುವುದಕ್ಕೂ ಅವಕಾಶ ಕೊಡದೇ ಹೋದರೆ ನಾವು ಎಲ್ಲಿ ಹೋಗಬೇಕು ?

ಶ್ರೀ ಎನ್. ಸಂಪಂಗಿ :– ಮಾನ್ಯ ಅಧ್ಯಕ್ಷರೆ, ಒಂದು ಲಕ್ಷ ಕೋಟಿ ರೂಪಾಯಿಯ ಬಜೆಟ್‌ನ್ನು ನಾವು ಕೇವಲ 3–4 ಗಂಟೆಯಲ್ಲಿ ಮಾತನಾಡುವುದು ಎಂದರೆ ಏನರ್ಥ ?

ಅಧ್ಯಕ್ಷರು :– ಮತ್ತೆ ಪೂರಕವಾಗಿ ಇನ್ನೊಂದು ಸಲ ಚರ್ಚೆಗೆ ಅವಕಾಶ ಇದೆಯಲ್ಲ. ಈಗ vote an account ಮಾತ್ರ ಚರ್ಚೆ ಇದೆ. ಆಮೇಲೆ ಚರ್ಚೆ ಮಾಡಬಹುದು.

6. ವಿತ್ತೀಯ ಕಾರ್ಯಕಲಾಪ :

2012–13ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲೆ ಮುಂದುವರೆದ ಸಾಮಾನ್ಯ ಚರ್ಚೆ

ಶ್ರೀ ಸಿದ್ಧರಾಮಯ್ಯ :– ಮಾನ್ಯ ಅಧ್ಯಕ್ಷರೆ, ನಾವು ನಿನ್ನೆ BAC ಯಲ್ಲಿ ಕೂಡ tentative ಆಗಿ ಇರಲಿ ಎಂದು ಚರ್ಚೆ ಮಾಡಿದ್ದೇವೆ. ಏಕೆಂದರೆ ಬರಗಾಲದ ವಿಚಾರದಲ್ಲಿ ಕೂಡ ಬಹಳಷ್ಟು ಸದಸ್ಯರಿಗೆ ಮಾತನಾಡುವುದಕ್ಕೆ ಅವಕಾಶ ಸಿಗಲಿಲ್ಲ. ಅದರ ಬಗ್ಗೆ ಬಹಳ ಜನ ಮಾತನಾಡಬೇಕೆಂದು ಇದ್ದರು. ಹಾಗಾಗಿ ಬಹಳ ಜನ ಮಾತನಾಡುವ ಅವಕಾಶದಿಂದ ವಂಚಿತರಾಗಿಬಿಟ್ಟಿದ್ದಾರೆ. ಈ ಬಜೆಟ್ ಮೇಲೆ ಬೇರೆಯವರು ಯಾರು ಮಾತನಾಡುತ್ತಾರೆ. ಮಾತನಾಡಲಿ.